# ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 798

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 16.12.2024

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮತ್ತು ಆಸ್ಪತ್ರೆಗಳ ಮೇಲೆ ನಡೆಯುತ್ತಿರುವ ದಾಳಿ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | **ಬಂದಿದೆ.** |
| ಆ. | ಬಂದಿದ್ದಲ್ಲಿ, ಕರ್ತವ್ಯ ನಿರತ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳ ಸುರಕ್ಷತೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಕಾರ್ಯಪಡೆ (National task Force) ನೀಡಿರುವ ಮಾರ್ಗಸೂಚಿಗಳನ್ನು ಕಾರ್ಯರೂಪಕ್ಕೆ ತರಲು ರಾಜ್ಯ ಕಾರ್ಯಪಡೆ (State Task Force) ಸಮಿತಿಯನ್ನು ದಿನಾಂಕ: 03.10.2024 ರಂದು ರಚಿಸಲಾಗಿದೆ. ವಿವರಗಳನ್ನು **ಅನುಬಂಧ-01**ರಲ್ಲಿ ನೀಡಲಾಗಿದೆ.<br><br>ವೈದ್ಯರು ಮತ್ತು ವೈದ್ಯೇತರ ಸಿಬ್ಬಂದಿಗಳ ಸುರಕ್ಷತೆಗೆ ಸಂಬಂಧಪಟ್ಟಂತೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಉಪ ಸಮಿತಿಗಳ ರಚನೆ:- ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸುರಕ್ಷತಾ ಶಿಷ್ಟಾಚಾರಗಳನ್ನು ನಿರ್ಣಯಿಸಲು ಮತ್ತು ಸುಧಾರಿಸಲು ಮಾಸಿಕ ಭದ್ರತಾ ಲೆಕ್ಕ ಪರಿಶೋಧನೆಯನ್ನು ನಡೆಸಲು ಜವಾಬ್ದಾರಿಯುತ ವೈದ್ಯಕೀಯ ಅಧೀಕ್ಷಕರ ಅಧ್ಯಕ್ಷತೆಯ ಉಪ ಸಮಿತಿಯನ್ನು ಸ್ಥಾಪಿಸಲು ಸೂಚಿಸಿದೆ.<br><br>2. ಜಾಗೃತಿ ಸುರಕ್ಷತೆಗೆ ಆಂತರಿಕ ಅನುಸರಣೆ ಸಮಿತಿಯ (ICC) ರಚನೆಯನ್ನು ಸ್ಥಾಪಿಸುವುದು ಹಾಗೂ ಪ್ರತಿ ಮಾಹೆಯಲ್ಲಿ ಬಂದಿರುವಂತಹ ವಿಷಯಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.<br><br>3. ಆಸ್ಪತ್ರೆಯ ಆವರಣದಲ್ಲಿ ವಿದ್ಯುತ್ ಬೆಳಕಿನ ಪ್ರಮಾಣ ಹೆಚ್ಚಿಸಲು ಸೂಚಿಸಲಾಗಿದೆ. (Adequate Lighting).<br><br>4. ಡ್ಯೂಟಿ ರೂಮ್ ವ್ಯವಸ್ಥೆಗಳು:- ಮಹಿಳಾ ಮತ್ತು ಪುರುಷ ಸಿಬ್ಬಂದಿಗಳಿಗೆ ಪ್ರತ್ಯೇಕ ಕೊಠಡಿ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ವಿಶೇಷವಾಗಿ ರಾತ್ರಿ ಪಾಳಿಯಲ್ಲಿ, ಸುರಕ್ಷತೆಯನ್ನು ಖಚಿತ ಪಡಿಸಿಕೊಳ್ಳಲು ಎಲ್ಲಾ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚಿಸಿದೆ ಹಾಗೂ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವ ವೈದ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಸಾರಿಗೆ ವ್ಯವಸ್ಥೆ ಮಾಡಲು ನಿರ್ದೇಶಿ ಸಲಾಗಿದೆ ( ರಾತ್ರಿ 10:00 ರಿಂದ ಬೆಳಗಿನ ಜಾವ 6:00ರ ವರೆಗೆ). |

| | | |
|---|---|---|
| | | 5. ಸಿಸಿಟಿವಿ ಕಣ್ಗಾವಲು ಮೇಲ್ವಿಚಾರಣೆ:- ವಿಶೇಷವಾಗಿ ಆಸ್ಪತ್ರೆಯ ಮುಖ್ಯದ್ವಾರ, ತುರ್ತು ನಿಗಾ ಘಟಕ, ಹೆರಿಗೆ ವಿಭಾಗ, ಐಸಿಯು ವಿಭಾಗ, ಹೊರ ಮತ್ತು ಒಳ ರೋಗಿಗಳ ವಿಭಾಗ ಹಾಗೂ ಇತರೆ ಸೂಕ್ಷ್ಮ ಸ್ಥಳಗಳಲ್ಲಿ ಸಿಸಿಟಿವಿಯನ್ನು ಅಳವಡಿಸಿ ಅವುಗಳ ಮೇಲ್ವಿಚಾರಣೆಯನ್ನು ಆಸ್ಪತ್ರೆಯ ಮುಖ್ಯಾಧಿಕಾರಿಯ ಕೊಠಡಿಯಲ್ಲಿ ಸ್ಥಾಪಿಸುವುದು.<br><br>6. ಭದ್ರತಾ ಸಿಬ್ಬಂದಿ ಈಗಾಗಲೇ ಕೆಲವು ಆಸ್ಪತ್ರೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಆರೋಗ್ಯ ರಕ್ಷಾ ಸಮಿತಿಯ ಉಪ ಸಮಿತಿಯ ತೀರ್ಮಾನದಂತೆ ಕೆಲ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br>7. ನಿಯಂತ್ರಿತ ಪ್ರವೇಶ:-ಸಂಜೆ 4:30ರ ನಂತರ, ಆಸ್ಪತ್ರೆಗಳಿಗೆ ಬರುವ ರೋಗಿಗಳು ಮತ್ತು ಸಾರ್ವಜನಿಕರಿಗೆ ಒಂದೇ ಪ್ರವೇಶ ಸ್ಥಳಕ್ಕೆ ಸೀಮಿತಗೊಳಿಸಿದೆ.<br><br>8. ಆಸ್ಪತ್ರೆಗೆ ಬರುವ ರೋಗಿಗಳು ಮತ್ತ ರೋಗಿಗಳ ಸಂಬಂಧಿಕರನ್ನು ಆಸ್ಪತ್ರೆಯ ಪ್ರವೇಶದಲ್ಲಿ ಅವರ ಬ್ಯಾಗೇಜ್‌ಗಳನ್ನು ತಪಾಸಣೆ ನಡೆಸಿ ಆಸ್ಪತ್ರೆಯ ಒಳಗೆ ಪ್ರವೇಶಿಸಲು ಅನುಮತಿಸುವುದು. ಎಲ್ಲಾ ಪ್ರಮುಖ ದ್ವಾರಗಳಲ್ಲಿ ಭದ್ರತಾ ಸಿಬ್ಬಂದಿ ಕೇಂದ್ರವನ್ನು ಹೊಂದಿರುವಂತೆ ಕ್ರಮ ವಹಿಸಲು ಸೂಚಿಸಿದೆ.<br><br>9. ಪ್ಯಾನಿಕ್ ಬಟನ್/ ಎಚ್ಚರಿಕೆ ಘಂಟೆಯ ವ್ಯವಸ್ಥೆಯನ್ನು ಅಳವಡಿಸಲು ಶಿಫಾರಸ್ಸು ಮಾಡಲಾಗಿದೆ.<br><br>10. ಸಿಬ್ಬಂದಿಗಳಿಗೆ ತರಬೇತಿ:- ವೈದ್ಯರು ಮತ್ತು ವೈದ್ಯೇತ್ತರ ಸಿಬ್ಬಂದಿಗಳಿಗೆ ಸುರಕ್ಷತೆ ನೀಡುವ ಸಲುವಾಗಿ ನಿಯೋಜಿಸಿದ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡುವ ವ್ಯವಸ್ಥೆಯನ್ನು ಮಾನಸಿಕ ಆರೋಗ್ಯ ವಿಭಾಗ ಮತ್ತು ಆಯಾ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೌನ್ಸಿಲರ್ ರವರಿಂದ ಸೂಕ್ತ ತರಬೇತಿಯನ್ನು ನೀಡಲಾಗುತ್ತಿದೆ ಮತ್ತು ಕಾಲಕಾಲಕ್ಕೆ ರಿಫ್ರೆಶ್ ತರಬೇತಿಯನ್ನು ನೀಡಲು ಆದೇಶಿಸಲಾಗಿದೆ.<br><br>11. ಜಿಲ್ಲಾ ಕಾರ್ಯಪಡೆ ಸ್ಥಾಪನೆ:- ಪ್ರತಿ ಜಿಲ್ಲೆಯಲ್ಲಿ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸುವ ಸಲುವಾಗಿ ಜಿಲ್ಲಾ ಕಾರ್ಯಪಡೆ (District Task Force) ಸ್ಥಾಪನೆ ಮಾಡಲು ಸೂಚಿಸಿಲಾಗಿದೆ. |

**HFW 84 HSD 2024**

**( ದಿನೇಶ್ ಗುಂಡೂರಾವ್ )**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

(ಅನುಬಂಧ-II)

E-8629885
7/10/24
ಅನುಬಂಧ-1

**ಕರ್ನಾಟಕ ಸರ್ಕಾರ**

ಸಂಖ್ಯೆ : HFW/925/HSH/2024

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ : 03/10/ 024

## ಅಧಿಸೂಚನೆ

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ಅರ್ಜಿ – SMW (Crl) No(s) 2/2024ರಲ್ಲಿ ದಿನಾಂಕ : 20/08/2024 ಹಾಗೂ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಮಂತ್ರಾಲಯದ ಕಛೇರಿ ಜ್ಞಾಪನ ಸಂಖ್ಯೆ : C.18018/24/2024-H-II (FTS No. 8292453), ದಿನಾಂಕ : 21/08/2024ರಲ್ಲಿ ಕೇಂದ್ರ ಸರ್ಕಾರದ ಸಚಿವ ಸಂಪುಟದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಷ್ಟ್ರೀಯ ಕಾರ್ಯಪಡೆ (NTF) ಮಾದರಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ರಾಜ್ಯ ಕಾರ್ಯಪಡೆ (STF) ರಚಿಸಲಾಗಿದೆ.-

ಅಭಿಯಾನ ನಿರ್ದೇಶಕರ ಕಛೇರಿ
ಆರೋಗ್ಯ ಸೌಧ, ಬೆಂಗಳೂರು
ದಿನಾಂಕ:
ಸಂಖ್ಯೆ: 367

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ - ಅಧ್ಯಕ್ಷರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ - ಸದಸ್ಯರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ - ಸದಸ್ಯರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ - ಸದಸ್ಯರು
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು. - ಸದಸ್ಯರು
6. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು - ಸದಸ್ಯ ಕಾರ್ಯದರ್ಶಿ
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು. - ಸದಸ್ಯರು
8. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. - ಸದಸ್ಯರು
9. ಅಧ್ಯಕ್ಷರು, ಕರ್ನಾಟಕ ವೈದ್ಯಕೀಯ ಪರಿಷತ್ತು - ಸದಸ್ಯರು
10. ಅಧ್ಯಕ್ಷರು, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ - ಸದಸ್ಯರು
11. ಅಧ್ಯಕ್ಷರು ಭಾರತೀಯ ವೈದ್ಯಕೀಯ ಸಂಘ, ಬೆಂಗಳೂರು - ಸದಸ್ಯರು
12. ಅಧ್ಯಕ್ಷರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ನೌಕರರ ಸಂಘ - ಸದಸ್ಯರು
13. ಶುಶ್ರೂಷಾ ಭ್ರಾತೃತ್ವ - ಸದಸ್ಯರು
14. ಡಾ|| ಮನೀಶ್ ರೈ, ಪ್ರಾದೇಶಿಕ ನಿರ್ದೇಶಕರು, ಮಣಿಪಾಲ ಆಸ್ಪತ್ರೆ, ಬೆಂಗಳೂರು - ಸದಸ್ಯರು
15. ಡಾ|| ಯತೀಶ್, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು - ಸದಸ್ಯರು
16. ಶ್ರೀ. ಕಾಂತಿ ಜೋಶಿ, ನ್ಯಾಯವಾದಿ - ಸದಸ್ಯರು
17. ಡಾ||ನಾಗೇಂದ್ರ ಪ್ರಸಾದ್, ಎಂ.ಎಸ್. ರಾಮಯ್ಯ ಆಸ್ಪತ್ರೆ, ಹಾಗೂ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನ ಪ್ರತಿನಿಧಿ - ಸದಸ್ಯರು
18. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿ - ಸದಸ್ಯರು

ಈ ಮೇಲ್ಕಂಡ ರಾಜ್ಯ ಕಾರ್ಯಪಡೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂಪ್ರೇರಿತ ಅರ್ಜಿ – SMW (Crl) No(s) 2/2024ರಲ್ಲಿ ಕಾಲಕಾಲಕ್ಕೆ ನೀಡಲಿರುವ ಸೂಚನೆ ಹಾಗೂ ಈ ನಿಟ್ಟಿನಲ್ಲಿ ರಾಷ್ಟ್ರೀಯ ಕಾರ್ಯಪಡೆ (NTF)ಯು ನೀಡುವ/ನೀಡಲಿರುವ ಸಲಹೆ-ಸೂಚನೆಗಳ ಬಗ್ಗೆ ಪರಿಶೀಲಿಸಿ, ಕ್ರಮವಹಿಸತಕ್ಕದ್ದು.

JD (OPT)
7/10/24

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.
03/10/2024
(ಸಿ. ಮಂಜುಳಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1).
03/10/2024

ಇವರಿಗೆ:-

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ, ವಿಧಾನಸೌಧ, ಬೆಂಗಳೂರು.